ಆಹಾರದ ಹಕ್ಕನ್ನು ಪ್ರತಿಪಾದಿಸುವ ಹೊಸ ಯೋಜನೆಗಳು

976 (1442) ಡಾ॥ ಮಹದೇವಪ್ಪ ಹೆಚ್.ಸಿ. (ಟಿ. ನರಸೀಪುರ) : ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಿಜೆಪಿ ಸರ್ಕಾರವು ಅಸ್ತಿತ್ವಕ್ಕೆ ಬಂದ ನಂತರ ಆಹಾರದ ಹಕ್ಕನ್ನು ಪ್ರತಿಪಾದಿಸುವ ಹೊಸ ಯೋಜನೆಗಳನ್ನು ಅನುಷ್ಠಾನ ಗೊಳಿಸಲಾಗಿದೆಯೇ;

ಅನುಷ್ಠಾನಗೊಳಿಸಿದ್ದಲ್ಲಿ, ಅದರ ಸಂಪೂರ್ಣ ವಿವರ ನೀಡುವುದು;

ಆ) ಮುಂದಿನ ಮೂರು ವರ್ಷಗಳಲ್ಲಿ ಆಹಾರದ ಹಕ್ಕನ್ನು ಪ್ರತಿಪಾದಿಸಲು ಯೋಜನೆಯನ್ನು ಹಾಕಿಕೊಳ್ಳಲಾಗಿದೆಯೇ;

ಇ) ಹಾಗಿದ್ದಲ್ಲಿ, ಈ ಯೋಜನೆಯ ಅನುಷ್ಠಾನಕ್ಕಾಗಿ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ;

ಈ) ಈ ಯೋಜನೆಯ ಅನುಷ್ಠಾನಕ್ಕಾಗಿ ಇದುವರೆಗೆ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ; (ಸಂಪೂರ್ಣ ವಿವರ ನೀಡುವುದು)?

ಶ್ರೀ ಹೆಚ್. ಹಾಲಪ್ಪ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರ್ಲ ಸಚಿವರು) :

ಅ) ಆಹಾರದ ಹಕ್ಕಿನ ಕಾಯ್ದೆ ಸಧ್ಯ ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ. ಸದರಿ ಕಾನೂನು ಜಾರಿಯಾದ ನಂತರ ಆ ಸಂಬಂಧ ಹೊಸ ಯೋಜನೆಗಳನ್ನು ರಾಜ್ಯದಲ್ಲಿ ರೂಪಿಸಲು ಅಗತ್ಯ ಕ್ರಮ ಕೈಗೊಳ್ಳ ಲಾಗುವುದು.

ಪ್ರಸ್ತುತ ರಾಜ್ಯದಲ್ಲಿ 98,44 ಲಕ್ಷ ಬಿಪಿಎಲ್ ಪಡಿತರ ಚೀಟಿಗಳಿದ್ದು, ಈ ಕೆಳಕಾಣಿಸಿದಂತೆ ಪಡಿತರವನ್ನು ವಿತರಿಸಲಾಗುತ್ತಿದೆ.

ಪಡಿತರ ಚೀಟಿಯ ವಿಧ	ಅಕ್ಕಿ	ಗೋಧಿ	ಸಕ್ಕರೆ
	ಪ್ರಮಾಣ (ಕೆಜಿ ಪ್ರತಿ ಕಾರ್ಡಿಗೆ)	ಪ್ರಮಾಣ (ಕೆಜಿ ಪ್ರತಿ ಕಾರ್ಡಿಗೆ)	ಪ್ರಮಾಣ (ಕೆಜಿ ಪ್ರತಿ ಕಾರ್ಡಿಗೆ)
ಎಎವೈ	29	6	1
ಅಕ್ಷಯ (ಬಿಪಿಎಲ್)	ಪ್ರತಿ ವ್ಯಕ್ತಿಗೆ 4 ಕೆಜಿ ಯಂತೆ	ಪ್ರತಿ ವ್ಯಕ್ತಿಗೆ 1 ಕೆಜಿ ಯಂತೆ	1

ಕುಟುಂಬ ವೊಂದಕ್ಕೆ	ಗರಿಷ್ಟ 20 ಕೆಜಿ	ಗರಿಷ್ಟ 3 ಕೆಜಿ	

ಸೀಮೆಎಣ್ಣೆ	ಪ್ರಮಾಣ (ಲೀ) ಪ್ರತಿ ಕಾರ್ಡಿಗೆ
ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶ	7
ಉಳಿದ ಅನೌಪಚಾರಿಕ ಪಡಿತರ ಪ್ರದೇಶ	6
ಪಟ್ಟಣ ಪ್ರದೇಶ	5
ಗ್ರಾಮಾಂತರ ಪ್ರದೇಶ	3

ಆ) ಹಾಲಿ ಇರುವ ಪ್ರತಿ ಬಿಪಿಎಲ್ ಕಾರ್ಡಿಗೆ ಪ್ರತಿ ಕೆ.ಜಿ.ಗೆ ರೂ. 3.00 ರ ದರದಲ್ಲಿ ಅಕ್ಕಿ ಹಾಗೂ ಪ್ರತಿ ಕೆ.ಜಿ. ಗೆ ರೂ.3.00/– ರ ದರದಲ್ಲಿ ಗೋಧಿಯನ್ನು ವಿತರಿಸುವ ವ್ಯವಸ್ಥೆಯು ಮುಂದುವರೆಯುತ್ತದೆ.

ಇ) ಸದರಿ ಯೋಜನೆಯ ಅನುಷ್ಟಾನಕ್ಕಾಗಿ ಪ್ರಸ್ತುತ ರಾಜ್ಯ ಸರ್ಕಾರವು ವಾರ್ಷಿಕ 1157 ಕೋಟಿ ಆಹಾರ ಸಬ್ಸಿಡಿಯನ್ನು ಬಿಡುಗಡೆ ಮಾಡಿದೆ.

ಈ) ಹಾಲಿ ಚಾಲ್ತಿಯಲ್ಲಿರುವ ಬಿಪಿಎಲ್ ಪಡಿತರ ಚೀಟಿಗೆ ಪ್ರತಿ ಕೆ.ಜಿ.ಗೆ ರೂ.3.00 ರ ದರದಲ್ಲಿ ಅಕ್ಕಿ ಮತ್ತು ಗೋಧಿಯನ್ನು ವಿತರಿಸುವ ಯೋಜನೆಗೆ ರೂ.1,157 ಕೋಟಿಯನ್ನು ಖರ್ಚು ಮಾಡಲಾಗಿದೆ.

ಅಂತ್ಯೋದಯ ಅನ್ನ ಯೋಜನೆ, ಬಿಪಿಎಲ್ ಮತ್ತು ಇಬಿಪಿಎಲ್ ಪಡಿತರ ಹಾಗೂ ನೆಮ್ಮದಿ ಕೇಂದ್ರದಡಿ ಬಿಡುಗಡೆಯಾದ ಆಹಾರಧಾನ್ಯಗಳ ಆಹಾರ ಸಹಾಯಧನ ಮತ್ತು ಸಾಗಾಣಿಕೆ ವೆಚ್ಚದ ವಿವರ ಈ ಕೆಳಕಂಡಂತಿರುತ್ತದೆ.

(ರೂ. ಕೋಟಿಗಳಲ್ಲಿ)

ವರ್ಗ	ಕಾರ್ಡುಗಳ ಸಂಖ್ಯೆ	ಆಹಾರ ಸಹಾಯ ಧನ	ಸಾಗಾಣಿಕೆ ವೆಚ್ಚ	ಒಂದು ಮಾಹೆಗೆ ಆಗುವ ವೆಚ್ಚ	ವಾರ್ಷಿಕವಾಗಿ ಆಗುವ ವೆಚ್ಚ
ಎಎವೈ	1116087	0.00	1.68	1.68	20.16
ಬಿಪಿಎಲ್ ಮತ್ತು ಇಬಿಪಿಎಲ್	6272324	43.10	4.36	47.46	569.52
ನೆಮ್ಮದಿ ಕೇಂದ್ರ ಬಿಪಿಎಲ್)	2305200	45.74	1.58	47.32	567.84
ಒಟ್ಟು	**9693611**	**88.84**	**7.62**	**96.46**	**1157.52**

ಶೇಕಡ 3ರ ಬಡ್ಡಿ ದರದಲ್ಲಿ ಸಾಲ

977 (1437) ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ನೇ ಸಾಲಿನಲ್ಲಿ ಬೀದರ್ ಜಿಲ್ಲೆಯ ವಿವಿಧ ಸಹಕಾರ ಸಂಘ ಮತ್ತು ಬ್ಯಾಂಕುಗಳಲ್ಲಿ ಎಷ್ಟು ಜನ ಸಣ್ಣ ಮತ್ತು ಅತಿ ಸಣ್ಣ ರೈತರುಗಳು ಶೇಕಡ 3 ರ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಪಡೆದು ಕೊಂಡಿದ್ದಾರೆ?

ಆ) ಈ ಸಾಲಿನಲ್ಲಿ ಜಿಲ್ಲೆಯ ಎಷ್ಟು ಜನ ರೈತರಿಗೆ ಸಾಲ ನೀಡುವ ಗುರಿಯನ್ನು ಹೊಂದಲಾಗಿತ್ತು? ಈ ಪೈಕಿ ಎಷ್ಟು ಗುರಿಯನ್ನು ಸಾಧನೆ ಮಾಡಲಾಗಿದೆ?

ಇ) ಜಿಲ್ಲೆಯಲ್ಲಿ ಇನ್ನೂ ಅನೇಕ ಸಣ್ಣ ಮತ್ತು ಅತಿ ಸಣ್ಣ ರೈತರು ಈ ಸಾಲಕ್ಕೆ ಅರ್ಹರಾಗಿದ್ದರೂ ಅವರಿಗೆ ಸಾಲ ಸೌಲಭ್ಯ ಒದಗಿಸದಿರಲು ಕಾರಣಗಳೇನು?

ಈ) ಪ್ರಸಕ್ತ ಸಾಲಿನಲ್ಲಿ ಈ ಕೊರತೆಯನ್ನು ನೀಗಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುವುದು?